ಓಎಸ್ 125/2014

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 17.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು: 2(ಎ) ಯಿಂದ 2(ಸಿ) ಪ್ರತಿವಾದಿಗಳ ಪರ ವಕೀಲರಿಂದ</u>**

2ನೇ ವಾದಿ ನಾಗಮ್ಮ ನನ್ನ ತಂಗಿ. ನನ್ನ ತಂದೆಯ ತಂದೆ ಮತ್ತು ತಾಯಿ ಹೆಸರು ಸುಬ್ಬಪ್ಪ ಮತ್ತು ಮಾದಮ್ಮ. ವಾದಿಗಳಾದ ನಾವುಗಳು ಬಸಪ್ಪ ರವರ ಮಕ್ಕಳು ಎಂದರೆ ಸರಿ. ಕೊಂಗಳಪ್ಪ ರವರಿಗೆ 3 ಜನ ಮಕ್ಕಳು ಅವರುಗಳೆಂದರೆ ಕೊಂಗಳ್ಳಿ ಮಲ್ಲು, ನಾಗರಾಜು ಮತ್ತು ಮಹದೇವಮ್ಮ ಎಂದರೆ ಸರಿ. ಕೊಂಗಳ್ಳಿ ಮಲ್ಲು ರವರ ಹೆಂಡತಿಯ ಹೆಸರು ಧ್ರಾಕ್ಷಾಯಿಣಿ ಎಂದರೆ ಸರಿ. ಕೊಂಗಳ್ಳಿ ಮಲ್ಲು ಮತ್ತು ಧ್ರಾಕ್ಷಾಯಿಣಿ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ದಾವ ಐಟಂ ನಂ. 1, 4, 5 ಮತ್ತು 6ನೇ ಆಸ್ತಿಗಳು ಕೊಂಗಳಪ್ಪ ರವರ ಸ್ವಯಾರ್ಜಿತ ಆಸ್ತಿಗಳು ಅಂದರೆ ಸಾಕ್ಷಿಯು ಇಲ್ಲ ಅವರು ದೊಡ್ಡವರಾದ ಕಾರಣ ಒಟ್ಟು ಕುಟುಂಬದಲ್ಲಿ ಅವರ ಹೆಸರಿನಲ್ಲಿ ಖರೀದಿಸಲಾಗಿತ್ತು ಎಂದು ನುಡಿಯುತ್ತಾರೆ. ದಿನಾಂಕ 18.02.1980 ರಂದು ಸದರಿ ಆಸ್ತಿಗಳೊಂದಿಗೆ ಕೊಂಗಳಪ್ಪ ರವರು ಒಂದು ಮನೆ ಮತ್ತು ನಿವೇಶನವನ್ನು ಸಹ ಖರೀದಿ ಮಾಡಿದ್ದರು ಎಂದರೆ ಸುಳ್ಳು . ಕೊಂಗಳಪ್ಪ ರವರು ಅವರ ಜೀವಿತಾವಧಿಯಲ್ಲಿ ಸೌದೆ ವ್ಯಾಪಾರ ಮಾಡುತ್ತಿದ್ದರು ಮತ್ತು ಎತ್ತಿನಗಾಡಿಯನ್ನು ಬಾಡಿಗೆಗೆ ಓಡಿಸುತ್ತಿದ್ದರು ಹಾಗೂ ಅದರಿಂದ ಬಂದ ಆದಾಯದಿಂದ ದಾವ ಐಟಂ ನಂಃ 1, 4, 5 ಮತ್ತು 6, ಮನೆ ಮತ್ತು ನಿವೇಶನವನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಮಾವಿನ ತೋಟ ಮತ್ತು ತೆಂಗಿನ ಆದಾಯದಿಂದ ಒಟ್ಟಿಗೆ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ಮಾವಿನ ತೋಟ ಮತ್ತು ತೆಂಗಿನ ತೋಟ ಯಾವ ಸರ್ವೇ ನಂಬರ್ ನಲ್ಲಿ ಇದೆ ಎಂದರೆ ಸಾಕ್ಷಿಯು ನಾನು ಅವಿದ್ಯಾವಂತ ನಾನು ಓದಿಲ್ಲ, ನಮಗೆ ಒಟ್ಟು 9 ಸರ್ವೇ ನಂಬರ್ ಆಸ್ತಿಗಳು

ಇವೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ಕೊಂಗಳಪ್ಪ ರವರ ಸ್ವಯಾರ್ಜಿತ ಆಸ್ತಿಗಳಾಗಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಕೊಂಗಳಪ್ಪ ರವರು ಯಾವಾಗ ಮೃತಪಟ್ಟಿದ್ದಾರೆ ಎಂದು ನನಗೆ ದಿನಾಂಕ ಗೊತ್ತಿಲ್ಲ. 1993 ರಲ್ಲಿ ಕೊಂಗಳಪ್ಪ ರವರು ಮೃತಪಟ್ಟಿದ್ದಾರೆ ಎಂದರೆ ಸರಿ. ಕೊಂಗಳಪ್ಪ ಮೃತಪಟ್ಟ ನಂತರ ದಾವ ಐಟಂ ನಂಃ 1, 4, 5 ಮತ್ತು 6ನೇ ಸ್ವತ್ತುಗಳು ಕೊಂಗಳಪ್ಪ ರವರ ಮಕ್ಕಳಿಗೆ ಜಂಟಿ ಖಾತೆ ಆಗಿರುತ್ತದೆ ಎಂದರೆ ಈಗ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕೊಂಗಳಪ್ಪ ರವರ ಮಕ್ಕಳು ಕಳೆದ 10 ವರ್ಷಗಳ ಹಿಂದೆ ಸದರಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆಸ್ತಿಗಳು ನಮಗೆ ಅದರಲ್ಲಿ ಭಾಗ ನೀಡಿಲ್ಲ ಎಂದು ನುಡಿಯುತ್ತಾರೆ. ದಾವ ಐಟಂ ನಂಃ 2 ಮತ್ತು 3 ನೇ ಆಸ್ತಿಗಳು ಮಾತ್ರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸಾಕ್ಷಿಯು ದಾವ ಆಸ್ತಿಗಳೆಲ್ಲವು ಒಟ್ಟು ಕುಟುಂಬದ ಆಸ್ತಿಗಳು ಎಂದು ನುಡಿಯುತ್ತಾರೆ. ಐಟಂ ನಂಃ 2 ಮತ್ತು 3 ನೇ ಆಸ್ತಿಗಳಲ್ಲಿ ಮಾತ್ರ ವಾದಿಗಳಾದ ನಮಗೆ ಮತ್ತು ಪ್ರತಿವಾದಿಗಳಿಗೆ ಸಮಾನವಾದ ಹಕ್ಕು ಇದೆ, ಉಳಿದ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಕೊಂಗಳಪ್ಪ ರವರ ಸ್ವಯಾರ್ಜಿತ ಆಸ್ತಿಗಳನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ದಾವೆಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ದಾವ ಐಟಂ ನಂಃ 2 ಮತ್ತು 3ನೇ ಆಸ್ತಿಗಳನ್ನು ಹೊರತುಪಡಿಸಿ ಇನ್ನೂ ಪಿತ್ರಾರ್ಜಿತ ಆಸ್ತಿಗಳಿದ್ದು ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸುಬ್ಬಪ್ಪ ರವರಿಗೆ ಸೇರಿದ ಆಸ್ತಿಗಳಲ್ಲಿ ಮಾತ್ರ ನಮಗೆ ಭಾಗಾಂಶದ ಹಕ್ಕಿದೆ, ಉಳಿದ ಆಸ್ತಿಗಳಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 18.02.1980 ರ ಕ್ರಯ ಪತ್ರದ ಮೂಲಕ ಕೊಂಗಳಪ್ಪ ರವರು ದಾವ ಐಟಂ ನಂಃ1, 4, 5, 6, ಮನೆ ಮತ್ತು ನಿವೇಶನವನ್ನು ತಿಮ್ಮೇಗೌಡರ ಮಗ

ಓಎಸ್ 125/2014

ಪಿಡಬ್ಲ್ಯೂ 1

ಚೆಲುವೆಗೌಡರಿಂದ ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿದ್ದಾಗ ಕೊಂಗಳಪ್ಪ ರವರ ಹೆಸರಿನಲ್ಲಿ ಖರೀದಿ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು: 6 ಮತ್ತು 7ನೇ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ